# ಸ್ಮರಿಸು ಮನವೆ ಸ್ಮರಿಸು ಸ್ಮರನ ಪಿತನ
# (ಶ್ರೀ ಪ್ರಸನ್ನವೆಂಕಟದಾಸರ ಮುಂಡಿಗೆ)

– ಶ್ರೀ ಶ್ರೀನಿವಾಸ ಸು. ಮಠದ, ಬೆಂಗಳೂರು

ಸ್ಮರಿಸು ಮನವೆ ಸ್ಮರಿಸು ಸ್ಮರನ ಪಿತನ
ದುರಿತ ಭವಭಯ ಸಮೂಹದೂರಮಾವರನ ॥ ಪ ॥

ಒಬ್ಬ ಬಾಲನಯ್ಯನ ಒದೆದ
ಒಬ್ಬ ಬಾಲಗಟವಿಲೊಲಿದ
ಒಬ್ಬ ಬಾಲನ ಅಪ್ಪಿ ರಾಜ್ಯವ ಒಬ್ಬ ಬಾಲಗಿತ್ತು
ಒಬ್ಬ ಬಾಲೆಯಂಗುಟದಿ ಪೆತ್ತ
ಒಬ್ಬ ಬಾಲೆಯಂಗುಟದಿ ಪೊತ್ತ
ಒಬ್ಬ ಬಾಲೆಗಕ್ಷಯ್ಯೆಂದು ಕುಕ್ಷಿಲೊಬ್ಬ ಬಾಲಕನ ॥ 1 ॥

ಇಬ್ಬರ ಮೂರುಸಾರೆಲಳಿದ
ಇಬ್ಬರಿಹ ಭೂಜವ ಮುರಿದ
ಇಬ್ಬರೊಗ್ಗೂಡಿ ಬೆಳೆದು ಹನ್ನಿಬ್ಬರ ಬಡಿದ
ಇಬ್ಬರ ಕಾರಾಗಾರ ತಗಿದ
ಇಬ್ಬರುಪ್ವ ಬೇಡಲಿ ಸೆದೆದ
ಇಬ್ಬರಿಂದೈದಿ ಹೋಳಮಯ್ಯನ ನಿಬ್ಬರಿಸಿದನ ॥ 2 ॥

ಮೂರು ಮನೆಯೊಳಗಿಹನ
ಮೂರು ಮಾತಿಗೆ ಹೊಂದದವನ
ಮೂರು ಮೈಯನ ಕೃತ ಸೇವೆಗೆ ಮೂರು ರೂಪಾದನ
ಮೂರು ಪೊಳಲ ಹಗೆಕಾರನ
ಮೂರುವೆಂಬನರುಹಿದನ
ಮೂರಾಂತಕ-ಪ್ರಸನ್ವೆಂಕಟ ಮೂರು ಲೋಕೇಶನ ॥ 3 ॥

ಪ್ರಸ್ತುತ ಪದ್ಯದಲ್ಲಿ ಕಾಮನ ಪಿತನಾದ ಶ್ರೀಕೃಷ್ಣನ , ಶ್ರೀಹರಿಯ, ಸ್ಮರಿಸು ಎಂಬುದಾಗಿ ಶ್ರೀಪ್ರಸನ್ನವೆಂಕಟದಾಸರು ಅಪ್ಪಣೆ ಕೊಡಿಸಿದ್ದಾರೆ. ಆ ಶ್ರೀಹರಿಯು ಪಾಪವಿದೂರ, ಭವಭಯವಿದೂರನಾಗಿದ್ದಾನೆ. ಶ್ರೀ ಲಕ್ಷ್ಮೀದೇವಿಯರಿಗೆಪತಿಯಗಿದ್ದಾನೆ ಎಂಬುದಾಗಿ ತಿಳಿಸಿದ್ದಾರೆ.

**ಸ್ಮರಿಸು ಮನವೆ ಸ್ಮರಿಸು ಸ್ಮರನ ಪಿತನ**
**ದುರಿತ ಭವಭಯ ಸಮೂಹ ದೂರಮಾವರನ ॥ಪ॥**

ಹೇ ಮನಸ್ಸೇ! ನೀನು ಕಾಮನ ಪಿತನಾದ ಶ್ರೀಹರಿಯನ್ನು ಸ್ಮರಿಸು. ಆ ಶ್ರೀಹರಿಯು ಪಾಪ, ಭವ,ಭಯವಿದುರನಾಗಿದ್ದಾನೆ. ಶ್ರೀಲಕ್ಷ್ಮೀದೇವಿಯವರಿಗೆ ಪತಿಯಾಗಿದ್ದಾನೆ.

ಸ್ಮರ ಎಂದರೆ ಕಾಮ[1]– ಕಾಮನು ಪ್ರದ್ಯುಮ್ನನೆಂಬ ಹೆಸರಿನಿಂದ ಶ್ರೀಕೃಷ್ಣ ರುಕ್ಮಿಣಿದೇವಿಯರಲ್ಲಿ ಜನಿಸಿದ್ದಾನೆ.

ಶ್ರೀಕೃಷ್ಣನಿಂದ ಅಭಿನ್ನವಾದಸ ಶ್ರೀಹರಿಯನ್ನು ಸ್ಮರಿಸು ಎಂಬುದಾಗಿ ದಾಸರು ತಿಳಿಸಿದ್ದಾರೆ. ಈ ಮಾತನ್ನು ಮನಸ್ಸಿಗೆ ಸಂಬೋಧಿಸಿ ಹೇಳುತ್ತಿದ್ದಾರೆ. ಇದಕ್ಕೆ ಕಾರಣವೂ ಇದೆ.

**ಹರಿಃ ಸ್ಮೃತಿ: ಸರ್ವ ವಿಪದ್ವಿಮೋಕ್ಷಿಣೀ॥[2]**

ಶ್ರೀಹರಿಸ್ಮರಣೆ ನಮ್ಮನ್ನು ಎಲ್ಲ ವಿಪತ್ತುಗಳಿಂದ ಪಾರು ಮಾಡುತ್ತದೆ.

ಇನ್ನು ಮನಸ್ಸು ಚಂಚಲವಾದದ್ದು.

"ಚಂಚಲಂ ಹಿಮನಃ ಕೃಷ್ಣೆ"[3] ಉಕ್ತಿಯು ಇದನ್ನೇ ತಿಳಿಸಿಕೊಡುತ್ತದೆ. ಈ ಚಂಚಲವಾದ ಮನಸ್ಸನ್ನು ನಿಗ್ರಹಿಸಿ ಶ್ರಿಹರಿಯನ್ನು ಸ್ಮರಿಸಬೇಕಾದುದು ಅವಶ್ಯ. ಅದು ಪ್ರತಿಯೊಬ್ಬನ ಕರ್ತವ್ಯ ಕೂಡ ಆಗಿದೆ.

**ಮನ ಏವ ಮನುಷ್ಯಾಣಾಂಕಾರಣಂ ಬಂಧಮೋಕ್ಷಯೋಃ॥[4]**

ಉಕ್ತಿಯು ಮನಸ್ಸು ಸಂಸಾರದ ಬಂಧನಕ್ಕೂ ಮತ್ತು ಸಂಸಾರದ ವಿಮೋಚನೆಗೂ ಕಾರಣವಾಗಿದೆಯೆಂದು ತಿಳಿಸುತ್ತದೆ. ಮನಸ್ಸು ವಿಷಯ ಪದಾರ್ಥಗಳಲ್ಲಿ ತೊಡಗಿದರೆ ಅದು ಸಂಸಾರದ ಬಂಧನಕ್ಕೂ, ಅದೇ ಮನಸ್ಸು ಭಗವಂತನನ್ನು ನೆನೆಯುವುದರಲ್ಲಿ ತೊಡಗಿದ್ದಾದರೆ ಸಂಸಾರದ ಮೋಚನೆಗೂ ಕಾರಣವಾಗುತ್ತದೆ.

ಮನಸ್ಸು ಶ್ರೀಹರಿಯನ್ನು ಸ್ಮರಿಸಿದ್ದಾದರೆ ಎಲ್ಲ ನಮ್ಮ ಪಾಪಗಳಿಗೆ ಪ್ರಾಯಶ್ಚಿತ್ತ ಮಾಡಿಕೊಂಡಂತೆ ಆಗುತ್ತದೆ.

**ಕೃತೇಪಾಪೇ ನುತಾಪೋ ವೈ ಯಸ್ಯ ಪುಂಸಃ ಪ್ರಜಾಯತೇ।**
**ಪ್ರಾಯಶ್ಚಿತ್ತಂ ತು ತಸ್ಯೋಕ್ತಂ ಹರಿಸಂಸ್ಮರಣಂ ಪರಮ್॥[5]**

ತಿಳಿಯದೇ ಪಾಪಗಳನ್ನು ಮಾಡಿ ನಂತರ ಪಶ್ಚಾತ್ತಾಪ ಪಡುವ ಮಾನವನಿಗೆ ಉತ್ತಮವಾದ ಪ್ರಾಯಶ್ಚಿತ್ತವೆಂದರೆ ಶ್ರೀಹರಿಯ ಸ್ಮರಣೆಯೇ ಆಗಿದೆಯೆಂದು ತಿಳಿಯಬೇಕು.

**ನಾಮ್ನೋ ಸ್ತಿ ಯಾವತೀ ಶಕ್ತಿಃ ಪಾಪನಿರ್ಹರಣೇ ಹರೇಃ।**
**ತಾವತ್ಕರ್ತುಂ ನ ಶಕ್ನೋತಿಪಾತಕಂ ಪಾತಕೀ ಜನಃ॥[6]**

"ಹರಿ" ಎಂದು ಭಕ್ತಿಯಿಂದ ಸ್ಮರಿಸಿದಾಗ ಮಾನವನ ಅದೆಷ್ಟು ಪಾಪಗಳು ನಾಶವಾಗುವವೋ ಅಷ್ಟು ಪಾಪಗಳನ್ನು ಪಾಪಿಯಾದವನು ಮಾಡಲು ಸಾಧ್ಯವಿಲ್ಲ.

**ತದೈವ ಪುರುಷೋ ಮುಕ್ತೋ ಜನ್ಮದುಃಖ ಜರಾದಿಭಿಃ।**
**ಜಿತೇಂದ್ರಿಯೋ ವಿಶುದ್ಧಾತ್ಮಾ ಯದೈವ ಸ್ಮರತೇ ಹರಿಮ್॥[7]**

ಸರ್ವೇಂದ್ರಿಯಗಳನ್ನು ಜಯಿಸಿದವನಾಗಿ, ನಿರ್ಮಲ ಮನಸ್ಸುಳ್ಳವನಾಗಿ, ಶ್ರೀಹರಿಯನ್ನು ಸ್ಮರಿಸಿದಾಗಲೇ ಪುರುಷನು ಜನ್ಮ, ದುಃಖ, ಮುಪ್ಪು ಮೊದಲಾದವುಗಳಿಂದ ಬಿಡುಗಡೆ ಹೊಂದುತ್ತಾನೆ.

**ಇಂಥ ಶ್ರೀಹರಿಯು ಸ್ವತಃ ದುರಿತ, ಭವ, ಭಯಾದಿ ಸಮೂಹ ದೂರನಾಗಿದ್ದಾನೆ.**
**ಶ್ರೀಹರಿಗೆ ಅನಘಃ, ಪಾಪನಾಶನಃ, ಭಯಾಪಹಃ ಇತ್ಯಾದಿ ನಾಮಗಳುಂಟು.**[8]

ಶ್ರೀಹರಿಯು ಭಕ್ತರ ಪಾಪವನ್ನು ನಾಶಮಾಡುತ್ತಾನೆ, ಭಯವನ್ನು ನಾಶಮಾಡುತ್ತಾನೆ ಅಂದಮೇಲೆ ಅವನು ಸ್ವತಃ ಪಾಪ, ಭಯಾದಿ ದೂರನೆಂಬುದು ಕೈಮುತ್ಯನ್ಯಾಯದಿಂದ ಸಿದ್ಧವಾಗುತ್ತದೆ.

ಶ್ರೀವಿಷ್ಣುಸಹಸ್ರನಾಮಸ್ತೋತ್ರದಲ್ಲಿ ಭಗವಂತನಿಗೆ "ಭಿಷಕ್" ಎಂಬ ನಾಮವಿದೆ. ಅಂದರೆ ಭಗವಂತನು ಸಂಸಾರರೋಗಕ್ಕೆ ವೈದ್ಯನೆಂದು ಅರ್ಥವಾಗುತ್ತದೆ. ಇದರಿಂದ ಅವನಿಗೆ ಸಂಸಾರವಿಲ್ಲವೆಂಬುದು ಕೈಮುತ್ಯನ್ಯಾಯದಿಂದ ಸಿದ್ಧವಾಗುತ್ತದೆ.

"ಭವಸಂತಾಪಹಾನಿದ"[9] ಎಂಬುದಾಗಿ ಶ್ರೀಮಧ್ವಾಚಾರ್ಯರು ಭಗವಂತನನ್ನು ಕರೆದಿರುವುದು ಗಮನಾರ್ಹವಾಗಿದೆ.

ಆ ಭಗವಂತ "ಮಾವರ" ಅಂದರೆ ಲಕ್ಷ್ಮೀಪತಿಯಾಗಿದ್ದಾನೆ.

ಒಬ್ಬ ಬಾಲನಯ್ಯನ ಒದೆದ

**ಒಬ್ಬ ಬಾಲಗಟವಿಲೊಲಿದ**
**ಒಬ್ಬ ಬಾಲನ ಅಪ್ಪಿ ರಾಜ್ಯವ ಒಬ್ಬ ಬಾಲಗಿತ್ತು**
**ಒಬ್ಬ ಬಾಲೆಯಂಗುಟದಿ ಪೆತ್ತ**
**ಒಬ್ಬ ಬಾಲೆಯಂಗುಟದಿ ಪೊತ್ತ**
**ಒಬ್ಬ ಬಾಲೆಗಕ್ಷಯ್ಯೆಂದು ಕುಕ್ಷಿಲೊಬ್ಬ ಬಾಲಕನ ॥ 1 ॥**

ಆ ಭಗವಂತ ಕಾಳಿಯ ಸರ್ಪವನ್ನು ತುಳಿದ, ಧ್ರುವರಾಜರಿಗೆ ಅಡವಿಯಲ್ಲಿ ಒಲಿದು ಪ್ರತ್ಯಕ್ಷನಾದ, ಶ್ರೀಹನುಮಂತ ದೇವರನ್ನು ಅಪ್ಪಿಕೊಂಡು, ವಿಭಿಷಣಗೆ ರಾಜ್ಯವನಿತ್ತ. ಗಂಗೆಯನ್ನು ತನ್ನ ಉಂಗುಟದಿಂದ ಪಡೆದ, ಕಲ್ಲಾದ ಅಹಲ್ಯೆಯನ್ನು ಉದ್ಧರಿಸಿದ, ದ್ರೌಪದೀದೇವಿಗೆ ಅಕ್ಷಯವಸ್ತ್ರವನಿತ್ತ, ತನ್ನ ನಾಬಿಯಲ್ಲಿ ಬ್ರಹ್ಮದೇವರನ್ನು ಪಡೆದ.

ಒಬ್ಬ ಬಾಲನಯ್ಯನ ಒದೆದ

ಆ ಭಗವಂತ ಸರ್ಪಗಳಿಗೆ ಒಡೆಯನಾದ ಕಾಳಿಯ ಸರ್ಪನನ್ನು ಒದೆದು ತುಳಿದ ವಿಷಯವನ್ನು ಇಲ್ಲಿ ದಾಸರು ತಿಳಿಸಿದ್ದಾರೆ.

ಹಿಂದೆ ಯಮುನಾ ನದಿಯ ನೀರಿನಲ್ಲಿ ಕಾಲಿಯ ಸರ್ಪವು ವಾಸಿಸುತ್ತಿದ್ದ ಕಾರಣ ಆ ನೀರು ಗೋಪಾಲಕರಿಗೆ, ಗೋವುಗಳಿಗೆ ಕುಡಿಯಲು ಅಸಾಧ್ಯವಾಗಿತ್ತು. ಒಮ್ಮೆ ಶ್ರೀಕೃಷ್ಣನು ಗೋವು, ಗೋಪಾಲಕರ ಜೊತೆ ಯಮುನೆಗೆ ಬಂದನು. ಆಗ ಕೆಲವು ಗೋಪಾಲಕರು ಯಮುನೆಯ ನೀರನ್ನು ಕುಡಿದು ಮೂರ್ಛಿತರಾಗಿ ಕೆಳಗೆ ಬಿದ್ದರು. ಆಗ ಈಶ್ವರನಾದ ಶ್ರೀಕೃಷ್ಣನು ತನ್ನ ಅಮೃತಮಯ ದೃಷ್ಟಿಯಿಂದ ಕೂಡಲೇ ಬದುಕಿಸಿದನು. ಕಾಲಿಯನನ್ನು ಶಿಕ್ಷಿಸಬೇಕೆಂದು ಶ್ರೀಕೃಷ್ಣನು ಮಡುವಿಗೆ ಹಾರಿ ಕಾಲಿಯ ಹೆಡೆ ತುಳಿದು ಕುಣಿಯಹತ್ತಿದನು. ಕುಣಿಯುವ ಶ್ರೀಕೃಷ್ಣನ ತಾಂಡವ ನೃತ್ಯದಿಂದಾಗಿ ಕಾಲಿಯನ ಹೆಡೆಗಳು ಛಿನ್ನಭಿನ್ನವಾದವು. ಕಾಲಿಯನ

ಪತ್ನಿಯರು ಶ್ರೀಕೃಷ್ಣನನ್ನು ಕುರಿತು ಸ್ತೋತ್ರಮಾಡಿ ಪತಿಭಿಕ್ಷೆ ಬೇಡಲು ಪ್ರಾಣಭಿಕ್ಷೆ ನೀಡಿ ಅವರನ್ನು ಸಂತೋಷಗೊಳಿಸಿ ಕಾಲಿಯನನ್ನು ರಮಣಕದ್ವೀಪಕ್ಕೆ ಕಳಿಸಿಕೊಟ್ಟನು.

ಒಬ್ಬ ಬಾಲಗಟವಿಲೊಲಿದ

ಆ ಭಗವಂತ ಧ್ರುವರಾಜರ ತಪಸ್ಸಿಗೆ ಒಲಿದು ಪ್ರತ್ಯಕ್ಷನಾಗಿ ಅನುಗ್ರಹಿಸಿದ ವಿಷಯವನ್ನು ಇಲ್ಲಿ ತಿಳಿಸಿದ್ದಾರೆ.

ತಂದೆಯಾದ ಉತ್ತಾನಪಾದರಾಜನ ತೊಡೆಯ ಮೇಲೆ ಕುಳಿತುಕೊಳ್ಳಲು ಧ್ರುವರಾಜರು ಇಚ್ಛೆಪಟ್ಟಾಗ ಮಲತಾಯಿ ಸುರುಚಿಯ ಮಾತುಗಳಿಂದ ನೊಂದ ಧ್ರುವರಾಜರು ತಾಯಿ ಸುನೀತಿಯ ಮಾತಿನಂತೆ ಆ ಭಗವಂತನನ್ನು ಕಾಣಲು ಅಡವಿಗೆ ನಡೆದರು. ದಾರಿಯಲ್ಲಿ ಶ್ರೀ ನಾರದರ ಭೆಟ್ಟಿಯಾಯಿತು. ಅವರು ಧ್ರುವರಾಜರಿಗೆ "ಓಂ ನಮೋ ಭಗವತೇ ವಾಸುದೇವಾಯ" ಎಂಬ ದ್ವಾದಶಾಕ್ಷರ ಮಂತ್ರವನ್ನು ಉಪದೇಶಿಸಿದರು. ಅವರ ಉಪದೇಶದಂತೆ ಭಗವಂತನನ್ನು ಕುರಿತು ತಪಸ್ಸು ಮಾಡುತ್ತಿರಲು ಧ್ರುವರಾಜರ ಭಕ್ತಿಗೆ ಮೆಚ್ಚಿ ಶ್ರೀನಾರಾಯಣನು ಪ್ರತ್ಯಕ್ಷನಾದನು. ಆಗ ಧ್ರುವರಾಜರು ಸ್ತೋತ್ರಮಾಡಲು ಇಚ್ಚಿಸಿದರು. ಆದರೆ ಅವರ ಬಾಯಿಂದ ಮಾತೇ ಹೊರಡಲಿಲ್ಲ. ಆ ಭಗವಂತನು ಅವರ ಕೆನ್ನೆಗೆ ಶಂಖದಿಂದ ಸ್ಪರ್ಶಮಾಡಿದಾಗ ಕೂಡಲೇ ಸ್ತೋತ್ರ ಹೊರಬಂದಿತು.

**ಯೋ ಂತಃ ಪ್ರವಿಶ್ಯ ಮಮವಾಚಮಿಮಾಂ ಪ್ರಸುಪ್ತಾಂ**
**ಸಂಜೀವಯತ್ಯಖಿಲ ಶಕ್ತಿದರಃ ಸ್ವಧಾಮ್ನಾ।**
**ಅನ್ಯಾಂಶ್ಚ ಹಸ್ತ ಚರಣ ಶ್ರವಣ ತ್ವಗಾದೀನ್**
**ಪ್ರಾಣಾನ್ನಮೋ ಭಗವತೇ ಪುರುಷಾಯ ತುಭ್ಯಂ॥** [10]

ಈ ಸ್ತೋತ್ರದಿಂದ ಸಂತುಷ್ಟನಾದ ನಾರಾಯಣನು ಧ್ರುವರಾಜರಿಗೆ 36000 ವರ್ಷ ರಾಜ್ಯಭಾರ ಮಾಡುವಂತೆ ಅನುಗ್ರಹಿಸಿ ಧ್ರುವಲೋಕವನ್ನು ಕೂಡ ಅನುಗ್ರಹಿಸಿದನು.

ಒಬ್ಬ ಬಾಲನ ಅಪ್ಪಿ ರಾಜ್ಯವ ಒಬ್ಬ ಬಾಲಗಿತ್ತು॥

ಶ್ರೀರಾಮರೂಪೀ ಭಗವಂತ ಶ್ರೀ ಹನುಮಂತದೇವರನ್ನು ಅಪ್ಪಿಕೊಂಡು, ರಾವಣನ ಸಂಹಾರದ ಮೊದಲೇ ವಿಭೀಷಣನನ್ನು ಭಾವಿ ಲಂಕಾಧಿಪತಿಯನ್ನಾಗಿ ಮಾಡಿ ಅನುಗ್ರಹಿಸಿದನು. ಈ ವಿಷಯವನ್ನು ಇಲ್ಲಿ ತಿಳಿಸಿದ್ದಾರೆ.

ಕಾಡಿನಲ್ಲಿ ಶ್ರೀರಾಮನಿಲ್ಲದ ವೇಳೆಯಲ್ಲಿ ರಾವಣನು ಸಂನ್ಯಾಸಿ ವೇಷಧರಿಸಿ ಬಂದು ಸೀತಾಕೃತಿಯನ್ನು ಅಪಹರಿಸಿದನು. ತಾನು ಸ್ವತಃ ಆನಂದಪೂರ್ಣನಾಗಿದ್ದರೂ ಅಜ್ಞಜನರ ಮೋಹಕ್ಕಾಗಿ ದುಃಖಪಟ್ಟವನಂತೆ ತೋರಿಸಿ ಸೀತೆಯನ್ನು ಹುಡುಕುತ್ತಾ ಅಲೆದಾಡಿದನು. ಶ್ರೀಹನುಮಂತದೇವರು ಸೀತಾಕೃತಿಯನ್ನು ಭೆಟ್ಟಿಮಾಡಿ ರಾಮಾಂಗುಲೀಯಕವನ್ನು ಕೊಟ್ಟು, ಅವರಿಂದ ಚೂಡಾಮಣಿಯನ್ನು ಪಡೆದು ಬಂದು ಶ್ರೀರಾಮದೇವರ ಪಾದಗಳಲ್ಲಿ ಅರ್ಪಿಸಿದರು. ಆಗ ಶ್ರೀರಾಮದೇವರು ಅವರನ್ನು ಅಪ್ಪಿಕೊಂಡು "ಸಹಬೋಗ" ವೆಂಬ ಚತುರ್ಮುಖ ಬ್ರಹ್ಮಪದವಿಯನ್ನು ಕರುಣಿಸಿದರು.

**ಸಹಭೋಗ ಮನನ್ಯ ಲಭ್ಯಮಸ್ಮೈ ಹನುಮದ್ರೂಪವತೇ ದದೌಪುರಾಹಿ॥**[11]

ಹಿಂದೆ ಶ್ರೀರಾಮದೇವರು ದಕ್ಷಿಣಸಮುದ್ರವನ್ನು ತಲುಪಿದಾಗ, ರಾವಣನ ತಮ್ಮನಾದ ವಿಭೀಷಣನು ಬಂದು ಶ್ರೀರಾಮದೇವರಿಗೆ ಶರಣಾಗತನಾದನು. ಆಗ ಹನುಮಂತದೇವರು

"ಈ ವಿಭೀಷಣನು ಶ್ರೀರಾಮದೇವರ ಭಕ್ತನಾಗಿದ್ದಾನೆ. ಅದ್ದರಿಂದ ಇವನು ಗ್ರಾಹ್ಯನಾಗಿದ್ದಾನೆ. ರಾಕ್ಷಸನಾದ ರಾವಣನನ್ನು ಇನ್ನು ನಾಶಹೊಂದುವನೆಂದು ತಿಳಿದು ರಾಜ್ಯವನ್ನು ಅನುಭವಿಸಲೆಂದು ಶರಣಾಗತನಾಗಿದ್ದಾನೆ" ಎಂದು ಹೇಳಿದರು. ಶ್ರೀರಾಮದೇವರು ವಿಭೀಷಣನನ್ನು ತಮ್ಮ ಭೃತ್ಯನನ್ನಾಗಿ ಮಾಡಿಕೊಂಡು ಅವನನ್ನು ರಾವಣನ ಸಂಹಾರದ ಮೊದಲೇ"ಭಾವಿಲಂಕಾಧಿಪತಿ"ಯನ್ನಾಗಿ ಮಾಡಿ ರಾಜ್ಯದಲ್ಲಿ ಅಭಿಷೇಕ ಮಾಡಿದರು.

**ಇತ್ಯುಕ್ತವಾಕ್ಯ ಉತ ತಂ ಸ್ವಜನಂ ವಿಧಾಯ**
**ರಾಜ್ಯೇ ಭ್ಯಷೇಚದಪಾದ ಸುಸತ್ವರಾಶಿಃ|**
**ಮತ್ವಾ ತೃಣೋಪಮಮ ಶೇಷಸದಂತಕಂ ತಂ**
**ರಕ್ಷಃ ಪತೇ ಸ್ತ್ವವರಜಸ್ಯ ದದೌ ಸ ಲಂಕಾಮ್||**[12]
**ಒಬ್ಬ ಬಾಲೆಯುಂಗುಟದಿ ಪೆತ್ತ||**

ಆ ಭಗವಂತ ಗಂಗೆಯನ್ನು ತನ್ನ ಉಂಗುಟದಿಂದ ಪಡೆದ ವಿಷಯವನ್ನು ಇಲ್ಲಿ ತಿಳಿಸಿದ್ದಾರೆ.

ಶ್ರೀಹರಿಯ ಸಾಕ್ಷಾತ್ ಅವತಾರನಾದ ಶ್ರೀವಾಮನದೇವರು ಅದಿತಿದೇವಿಯರನ್ನು ನಿಮಿತ್ತಮಾಡಿ ಅವತರಿಸಿದರು. ನಂತರಬಲಿರಾಜನ ಯಜ್ಞವಾಟಕ್ಕೆ ಬಂದು ಮೂರು ಪಾದ ಭೂಮಿಯನ್ನು ದಾನವಾಗಿ ಪಡೆದು ಮೂರು ಲೋಕಗಳನ್ನು ಅಳೆದು ತನ್ನ ತ್ರಿವಿಕ್ರಮ ರೂಪವನ್ನು ಹೊಂದಿ ಪರಾಕ್ರಮ ತೋರಿದರು. ಆಗ ಅವರು ಮೇಲಕ್ಕೆ ಎತ್ತಿದ ಎಡದ ಕಾಲಿನ ಉಂಗುಟದ ಉಗುರು ಬ್ರಹ್ಮಾಂಡ ಕಟಾಹದ ಮೇಲ್ಭಾಗವನ್ನು ಭೇದಿಸಿತು. ಹೊರಗಿನ ಜಲತತ್ವದ ನೀರು ಒಳಗೆ ನುಗ್ಗಿತು. ಆ ನೀರನ್ನು ಬ್ರಹ್ಮದೇವರು ತಮ್ಮ ಕಮಂಡಲುವಿನಲ್ಲಿ ತೆಗೆದುಕೊಂಡು ಭಗವಂತನ ಪಾದಕಮಲಗಳನ್ನು ತೊಳೆದು ಆ ನೀರನ್ನು ತಮ್ಮ ತಲೆಯಲ್ಲಿ ಧರಿಸಿದರು. ಇದಕ್ಕೆ "ವಿಷ್ಣುಪದಿ", ಗಂಗೆಯೆಂದು ಕರೆಯುತ್ತಾರೆ.

**ತತ್ರ ಭಾಗವತಃ ಸಾಕ್ಷಾತ್ ಯಜ್ಞಲ್ಲಿಂಗಸ್ಯ ವಿಷ್ಣೋಃ ವಿಕ್ರಮತೋ ವಾಮಪಾದಾಂಗುಷ್ಠ**
**ನಖನಿರ್ಭಿನ್ನೋರ್ಧ್ವಾಂಡ ಕಟಾಹ ವಿವರೇಣಾಂತಃ ಪ್ರವಿಷ್ಟಾಯಾ ಬಾಹ್ಯ ಜಲಧಾರಾ ತಚ್ಚರಣ**
**ಪಂಕಜಾವನೇಜನಾರುಣ ಕಿಂಜಲ್ಕೋ ಪರಂಜಿತಾಖಿಲ ಜಗದಘಮಲಾ ಪಹೋಪಸ್ಪರ್ಶನಅಮಲಾ**
**ಸಾಕ್ಷಾತ್ ಭಗತ್ಪದೀತ್ಯನುಪಲಕ್ಷಿತ ವಚೋಭಿರಭಿದೀಯಮಾನಾ ತಿ ಮಹತಾಕಾಲೇನಯುಗ**
**ಸಹಸ್ರೋಪರಿಕ್ಷಣೇನ ದಿವೋ ಮೂರ್ಧನ್ಯವತತಾರ ಯತ್ತದ್ವಿಷ್ಣುಪದಮಾಹುಃ||**[13]
**ಒಬ್ಬ ಬಾಲೆಯುಂಗುಟದಿ ಪೊತ್ತ||**

ಗೌತಮರ ಶಾಪದಿಂದ ಕಲ್ಲಿನಲ್ಲಿರುವ ಅಹಲ್ಯೆಯನ್ನು ಉದ್ದರಿಸಿದ ಪ್ರಸಂಗವನ್ನು ಇಲ್ಲಿ ದಾಸರು ತಿಳಿಸಿದ್ದಾರೆ.

ಗೌತಮ ಋಷಿಗಳ ಶಾಪದಿಂದ ಅಹಲ್ಯೆಯು ಕಲ್ಲಿನ ರೂಪದಲ್ಲಿರುವಾಗ ಶ್ರೀರಾಮದೇವರು ತಮ್ಮ ಪಾದದ ಉಂಗುಟದಿಂದ ಉದ್ಧರಿಸಿದ ವಿಷಯವು ಶ್ರೀಮಧ್ವಾಚಾರ್ಯರಿಂದ ಉಕ್ತವಾಗಿದೆ.

**ಅಥೋ ಅಹಲ್ಯಾಂ ಪತಿನಾಭಿಶಪ್ತಾಂ**
**ಪ್ರದರ್ಷಣಾದಿಂದ್ರ ಕೃತಾಮುಪೀತಾಂ|**
**ಸ್ವದರ್ಶನಾನ್ನಾನುಷತಾ ಮುಪೇತಾಂ**
**ಸುಯೋಜಯಾಮಸ ಸ ಗೌತಮೇನೆ||**[14]

ಅಹಲ್ಯೆಯು ಇಂದ್ರದೇವರು ಮಾಡಿದ ಬಲಾತ್ಕಾರದ ಕಾರಣದಿಂದಾಗಿ ತನ್ನ ಪತಿಯಾದ ಗೌತಮರಿಂದ ಶಪಿಸಲ್ಪಟ್ಟು ಶಿಲೆಯಂತೆ ಆಗಿದ್ದಳು. ಶ್ರೀರಾಮದೇವರ ದರ್ಶನದಿಂದ ಅವಳು ಪುನಃ ಮನುಷ್ಯಳಂತೆ ಆದಳು. ಅಂತಹ ಅಹಲ್ಯೆಯನ್ನು ಶ್ರೀರಾಮದೇವರು ಗೌತಮರೊಂದಿಗೆ ಚೆನ್ನಾಗಿ ಜೊತೆಗೂಡಿಸಿದರು.

**ಒಬ್ಬ ಬಾಲೆಗಕ್ಷಯ್ಯೆಂದು ಕುಕ್ಷಿಲೊಬ್ಬ ಬಾಲಪನೆ॥**

ಭಗವಂತನು ದ್ರೌಪದೀದೇವಿಯರಿಗೆ ಅಕ್ಷಯವಸ್ತ್ರವನಿತ್ತನು. ತನ್ನ ನಾಭಿಯಲ್ಲಿ ಬ್ರಹ್ಮದೇವರನ್ನು ಪಡೆದನು.

ಶಕುನಿಯ ಸಲಹೆಯಂತೆ ಪಾಂಡವರ ಸಂಪತ್ತನ್ನು ಅಪಹರಿಸಲು ದುರ್ಯೋದನನು ತಂದೆ ಧೃತರಾಷ್ಟ್ರನ ಬಳಿ ಹೇಳಿದಾಗ ಧೃತರಾಷ್ಟ್ರನು ವಿದುರನ ಮೂಲಕ ಧರ್ಮರಾಜನಿಗೆ ದ್ಯೂತಕ್ಕೆ ಬರಲು ಹೇಳಿ ಕಳುಹಿಸಿದನು. ದ್ಯೂತಕ್ಕೆ ಒಪ್ಪಿಕೊಂಡು ಧರ್ಮರಾಜ ತಮ್ಮಂದಿರ ಜೊತೆಯಲ್ಲಿ ಬಂದ. ಭೀಮಸೇನ ಹಾಗೂ ವಿದುರರು ತಡೆದರೂ ಕೂಡ ದರ್ಮರಾಜನು ತನ್ನ ಎಲ್ಲ ಸಂಪತ್ತನ್ನು ದ್ಯೂತದಲ್ಲಿ ಪಣವಾಗಿಟ್ಟು ಸೋತುಬಿಟ್ಟ. ನಂತರ ಧರ್ಮರಾಜನು ನಕುಲ, ಸಹದೇವ, ಅರ್ಜುನ ನಂತರ ಭೀಮಸೇನನನ್ನು ಮುಂದೆ ದ್ರೌಪದಿಯನ್ನು, ಕ್ರಮವಾಗಿ ತನ್ನನ್ನೂ ಪಣಕ್ಕಿಟ್ಟು ಸೋತುಹೋದ. ಬಳಿಕ ದುರ್ಯೋಧನ ತನ್ನ ಸಾರಥಿಯನ್ನು ದ್ರೌಪದಿಯ ಹತ್ತಿರ ಕಳಿಸಿದ. ದ್ರೌಪದಿಯು ಸಭೆಗೆ ಬರಲು ನಿರಾಕರಿಸಿದಾಗ ದುರ್ಯೋಧನನು ತನ್ನ ತಮ್ಮ ದುಃಶ್ಯಾಸನನನ್ನು ಕಳಿಸಿಕೊಟ್ಟ. ಅವನು ದ್ರೌಪದಿಯನ್ನು ಕೇಶಪಾಶದಲ್ಲಿ ಹಿಡಿದು ಏಕವಸ್ತ್ರದಲ್ಲಿದ್ದ ಅವಳನ್ನು ಸಭೆಗೆ ಎಳೆದು ತಂದ. ದುರ್ಯೋಧನನ ಅದೇಶದಂತೆ ದುಃಶ್ಯಾಸನ ಪಾಂಡವರು ನೋಡುತ್ತಿದ್ದಂತೆಯೇ ದ್ರೌಪದಿಯ ಸೀರೆ ಸೆಳೆಯತೊಡಗಿದ.

**ವಿಕೃಷ್ಯಮಾಣೇ ವಸನೇ ತು ಕೃಷ್ಣಾ ಸಸ್ಮಾರ ಕೃಷ್ಣಂ ಸುವಿಶೇಷಲೋ ಪಿ।**
**ತದಾ ನ್ಯದಾಸೀದ್ವಸನಂಚತಸ್ಯಾ ದಿವ್ಯಂ ಸುಸೂಕ್ಷ್ಮಂಕನಕಾವದಾತಮ್॥**[15]

ದುಃಶ್ಯಾಸನನು ಸೀರೆಯನ್ನು ಸೆಳೆಯತೊಡಗುತ್ತಲೇ ದ್ರೌಪದಿಯು ಅತ್ಯಂತ ಭಕ್ತಿಯಿಂದ ಶ್ರೀಕೃಷ್ಣನನ್ನು ಸ್ಮರಿಸತೊಡಗಿದಳು. ಅವನು ಸೀರೆ ಸೆಳೆಯುತ್ತಿದ್ದಂತೆಯೇ ಒಂದರ ನಂತರ ಮತ್ತೊಂದು ಕನಕ ಬಣ್ಣದ ಸೀರೆ ಕಾಣಿಸತೊಡಗಿತು. ಹೀಗೆ ಶ್ರೀಕೃಷ್ಣ ಅಕ್ಷಯ ವಸ್ತ್ರನೀಡಿ ದ್ರೌಪದಿಯ ಮಾನರಕ್ಷಣೆ ಮಾಡಿದ.

ಆ ಭಗವಂತ ತನ್ನ ನಾಭಿಯಲ್ಲಿ ಬ್ರಹ್ಮದೇವರನ್ನು ಪಡೆದಿದ್ದಾನೆ.

**ಯಸ್ಮಾದುತ್ಪದ್ಯತೇ ಬ್ರಹ್ಮಾ ಪದ್ಮಯೊನಿಃ ಪಿತಾಮಹಃ।**
**ಬ್ರಹ್ಮಯೋನಿರ್ಹಿ ವಿಶ್ವಾತ್ಮಾ ಸೆ ಮೇ ವಿಷ್ಣುಃ ಪ್ರಸೀದತು॥**[16]

ಆ ಭಗವಂತನ ನಾಬಿಯಲ್ಲಿ ಹುಟ್ಟಿದ ಕಮಲದಲ್ಲಿ ಪಿತಮಹರಾದ ಬ್ರಹ್ಮದೇವರು ಉತ್ಪನ್ನರಾದರು. (ಚತುರ್ಮುಖ ಬ್ರಹ್ಮದೇವರಿಗೆ ಹದಿನಾಲ್ಕುಲೋಕಾತ್ಮಕ ಪದ್ಮವು ಅಶ್ರಯವಾಯಿತು)

**ಇಬ್ಬರ ಮೂರುಸಾರೆಲಳಿದ**
**ಇಬ್ಬರಿಹ ಭೂಜವ ಮುರಿದ**
**ಇಬ್ಬರೊಗ್ಗೂಡಿ ಬೆಳೆದು ಹನ್ನಿಬ್ಬರ ಬಡಿದ**
**ಇಬ್ಬರ ಕಾರಾಗಾರ ತಗಿದ**
**ಇಬ್ಬರುಪ್ಪ ಬೇಡಲಿ ಸೆದೆದ**
**ಇಬ್ಬರಿಂದೈದಿ ಹೋಳಮಯ್ಯನ ನಿಬ್ಬರಿಸಿದನ ॥ 2 ॥**

ಆ ಭಗವಂತನು ಜಯವಿಜಯರನ್ನು ಮೂರು ಜನ್ಮಗಳಲ್ಲಿ ನಾಶಪಡಿಸಿದ. ನಲಕೂಬರ ಮಣಿಗ್ರೀವರು ಅರ್ಜುನ ವೃಕ್ಷದಲ್ಲಿದ್ದರು. ಅವರ ವಿಮೋಚನೆಗಾಗಿ ಆ ವೃಕ್ಷವನ್ನು ಮುರಿದುಹಾಕಿ ಅವರನ್ನು ಉದ್ಧರಿಸಿದ. ಬಲರಾಮ, ಕೃಷ್ಣ ಇಬ್ಬರೂ ಕೂಡಿ ಬೆಳೆದರು. ನಂತರ 12ಜನ ರಾಕ್ಷಸರನ್ನು ಸಂಹರಿಸಿದರು. ವಸುದೇವ ದೇವಕಿಯರನ್ನು ಕಾರಾಗೃಹದಿಂದ ಬಿಡಿಸಿ ರಕ್ಷಿಸಿದ. ಅರ್ಜುನ ಮತ್ತು ದುರ್ಯೋಧನ ಇಬ್ಬರೂ ಸಹಾಯ ಬೇಡಲು ಶ್ರೀಕೃಷ್ಣನ ಹತ್ತಿರ ಬಂದರು. ಅರ್ಜುನನಿಗೆ ಸಾರಥ್ಯಮಾಡಿ ದುರ್ಯೋಧನನನ್ನು ನಾಶಮಾಡಿಸಿದ.

ಶ್ರೀಕೃಷ್ಣ, ಅರ್ಜುನ, ಭೀಮಸೇನನ ಜೊತೆಯಲ್ಲಿ ಬಂದು ಜರಾಸಂಧನನ್ನು ಸಂಹರಿಸಿದರು.

ಇಬ್ಬರ ಮೂರು ಸಾರೆಲಳಿದ

ಆ ಭಗವಂತನು ಜಯವಿಜಯರನ್ನು ತಾನೇ ಮೂರು ಜನ್ಮಗಳಲ್ಲಿ ನಾಶಪಡಿಸಿದ.

ಹಿಂದೆ ಒಮ್ಮೆ ಸನಕ ಸನಂದ ಮೊದಲಾದವರು ಶ್ರೀಹರಿಯ ವೈಕುಂಠ ಲೋಕಕ್ಕೆ ಹೋಗಿದ್ದರು. ವೈಕುಂಠ ಲೋಕದ ಏಳನೆಯ ಪ್ರಾಕಾರದ ಹೆಬ್ಬಾಗಿಲಿಗೆ ಬಂದಾಗ ಗಧಾಪಾಣಿಗಳಾದ ಜಯ ವಿಜಯರು ಅವರನ್ನು ತಡೆದರು. ಅವರು ಕೋಪದಿಂದ "ನೀವು ಶ್ರೀಹರಿಗೆ ಶತ್ರುಗಳೆನಿಸುವ ಮೂರು ದೇಹಗಳನ್ನು ಹೊಂದಿರಿ" ಎಂದರು. ಜಯವಿಜಯರು ಭಯದಿಂದ ಆ ಸನಕಾದಿಗಳಿಗೆ "ನಮಗೆ ಭಗವಂತನ ಸ್ಮರಣೆಯನ್ನು ಹಾಳುಮಾಡುವ ಅಜ್ಞಾನವು ಬರದಂತೆ ಅನುಗ್ರಹಿಸಿರಿ" ಎಂದು ಬೇಡಿಕೊಂಡರು. ಇದನ್ನು ತಿಳಿದ ಸರ್ವಜ್ಞನಾದ ಶ್ರೀಹರಿಯು ಸನಕಾದಿಗಳಿದ್ದಲ್ಲಿಗೆ ಬಂದನು. ಸನಕಾದಿಗಳು ಶ್ರೀಹರಿಗೆ ಕೂಡಲೇ ನಮಸ್ಕಾರ ಮಾಡಿದರು. ಶ್ರೀಹರಿಯು ಪ್ರಸನ್ನನಾಗಿ ನನ್ನ ದ್ವಾರಪಾಲಕರಲ್ಲಿ ಮುಖ್ಯರಾದ ಜಯವಿಜಯರು ನಿಮ್ಮನ್ನು ತಡೆದು ಅಪರಾಧಮಾಡಿದ್ದಾರೆ. ಪೂಜ್ಯರೇ ನೀವು ಪ್ರಸನ್ನರಾಗಿರಿ. ನಾನು ಬ್ರಾಹ್ಮಣಪ್ರಿಯನಾಗಿದ್ದ ವಿಷಯ ತಿಳಿದಿದ್ದರೂ ವಿಚಾರಮಾಡದೇ ನಿಮ್ಮನ್ನು ತಡೆದುದಕ್ಕೆ ಇವರು ಅಸುರಯೋನಿ ಹೊಂದುವುದು ಯುಕ್ತವೇ ಆದರೂ ನಿಮ್ಮ ಶಾಪದಂತೆ ಇವರಿಗೆ ಎಷ್ಟು ಕಾಲವಾದರೂ ಅಸುರಯೋನಿಯಿಂದ ಬಿಡುಗಡೆ ಇಲ್ಲ. ಕಾರಣ ಹೆಚ್ಚು ಕಾಲ ವಿಳಂಬವಿಲ್ಲದೇ ಮತ್ತೆ ನನ್ನ ಸಮೀಪಕ್ಕೆ ಬರಲಿ ಎಂದು ನಿಮ್ಮ ಶಾಪಕ್ಕೆ ಒಂದು ಅವಧಿ ಕಲ್ಪಿಸುತ್ತೇನೆ. ಇದು ನಿಮಗೂ ಒಪ್ಪಿಗೆ ಎಂದು ಭಾವಿಸುವೆ. ಅದಕ್ಕೆ ಸನಕಾದಿಗಳು ನೀನು ಮಾಡಿರುವುದು ನಮಗೂ ಸಮ್ಮತವೆಂದು ವಿಜ್ಞಾಪಿಸಿಕೊಂಡರು.

ಸನಕಾದಿಗಳ ಮಾತಿಗೆ ಉತ್ತರವಾಗಿ ಶ್ರೀಹರಿಯು ಬ್ರಾಹ್ಮಣರೇ! ಈ ಜಯವಿಜಯರು ಕಾಲವಿಲಂಬವಿಲ್ಲದೇ ಅಸುರ ದೇಹವನ್ನು ಸೇರಿ, ಅಲ್ಲಿ ದ್ವೇಷಮಾಡುವ ಜೀವನ ಜೊತೆಗೆ ಇದ್ದರೂ ನನ್ನಲ್ಲಿ ಏಕಾಗ್ರತೆಯಿಂದ ಕೂಡಿದ ಭಕ್ತಿಯನ್ನು ಹೊಂದಿ ಮತ್ತೆ ನನ್ನಲ್ಲಿಗೆ ಬರುವರು.

ಅವರು ಅದಿತಿ ಉದರದಲ್ಲಿ ಹಿರಣ್ಯಕಶಿಪು, ಹಿರಣ್ಯಾಕ್ಷ, ಶಿಶೂಪಾಲ, ದಂತವಕ್ರ, ರಾವಣ, ಕುಂಭಕರ್ಣರಾಗಿ ಹುಟ್ಟಿ ಭಗವಂತನಿಂದ ಮೂರು ಜನ್ಮಗಳಲ್ಲಿ ನಾಶಹೊಂದಿದರು.

ಇಬ್ಬರಿಹ ಭೂಜವ ಮುರಿದ

ನಲಕೂಬರ, ಮಣಿಗ್ರೀವರು ಶಾಪವಶಾತ್ ಅರ್ಜುನವೃಕ್ಷದಲ್ಲಿದ್ದರು. ಅವರ ವಿಮೋಚನೆಗಾಗಿ ಆ ವೃಕ್ಷವನ್ನು ಮುರಿದು ಹಾಕಿ ಅವರನ್ನು ಉದ್ಧರಿಸಿದ.

ಒಮ್ಮೆ ಯಶೋದೆಯು ಶ್ರೀಕೃಷ್ಣನನ್ನು ಒರಳಿಗೆ ಕಟ್ಟಿಹಾಕಿ ತನ್ನ ಮನೆಗೆಲಸ ಮಾಡಲು ಹೋದಳು. ಆಗ ಶ್ರೀಕೃಷ್ಣನು ಆ ಒರಳುಕಲ್ಲನ್ನು ಎಳೆಯುತ್ತಾ ಅವಳಿ ಅರ್ಜುನಮರಗಳ ನಡುವೆ ಹೋಗುತ್ತಿರಲು ಆ ಎರಡೂ ಮರಗಳು ಬುಡಸಹಿತ ಉರುಳಿಬಿದ್ದವು. ಅಲ್ಲಿ ಶಾಪರೂಪದಿಂದ ಕುಬೇರ ಭೃತ್ಯರಾದ ನಲಕೂಬರ,

ಮಣಿಗ್ರೀವರು ಅಡಗಿದ್ದರು. ಆ ಇಬ್ಬರನ್ನೂ ಶಾಪಮುಕ್ತರನ್ನಾಗಿ ಮಾಡಿದನು. ಅವರಿಬ್ಬರೂ ಶ್ರೀಕೃಷ್ಣನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಉತ್ತರದಿಕ್ಕಿಗೆ ಹೊರಟುಹೋದರು.

ಇಬ್ಬರೊಡಗೂಡಿ ಬೆಳೆದು ಇನ್ನಿಬ್ಬರ ಬಡಿದ.

ಬಲರಾಮ, ಶ್ರೀಕೃಷ್ಣ ಇಬ್ಬರೂ ಕೂಡಿ ಬೆಳೆದರು. ನಂತರ12ಜನ ರಾಕ್ಷಸರನ್ನು ಸಂಹರಿಸಿದರು.

ಹಿಂದೆ ಭೂಭಾರಹರಣಕ್ಕಾಗಿ ಅವತರಿಸಿದ ಶ್ರೀಕೃಷ್ಣನು ಅಣ್ಣ ಬಲರಾಮನ ಜೊತೆಕೂಡಿಕೊಂಡು ಶಕಟಾಸುರ, ತೃಣಾವರ್ತಾಸುರ,ವತ್ಸಾಸುರ, ಪ್ರಲಂಬಾಸುರ, ಅರಿಷ್ಟಾಸುರ,ಕೇಶಿ ಎಂಬ ಅಸುರ, ವ್ಯೋಮಾಸುರ ಮೊದಲಾದ 12 ಜನ ಅಸುರರನ್ನು ಸಂಹಾರ ಮಾಡಿದನು.

ಇಬ್ಬರ ಕಾರಾಗಾರ ತೆಗೆದ

ಶ್ರೀಕೃಷ್ಣರೂಪೀ ಭಗವಂತ ವಸುದೇವ ದೇವಕೀದೇವಿಯರನ್ನು ಕಾರಾಗೃಹದಿಂದ ಬಿಡಿಸಿ ರಕ್ಷಿಸಿದ.

ಹಿಂದೆ ಮಧುರೆಯಲ್ಲಿ ಒಂದು ಸಲ ಶೂರಸೇನನ ಮಗನಾದ ವಸುದೇವನು ದೇವಕನ ಮಗಳಾದ ದೇವಕಿಯನ್ನು ವಿವಾಹ ಮಾಡಿಕೊಂಡು ತನ್ನ ಮನೆಗೆ ಹೊರಟಾಗ ವಸುದೇವ ದೇವಕಿಯರನ್ನು ರಥದಲ್ಲಿಕೂಡಿಸಿ ಕಂಸನು ಸ್ವತಃ ರಥವನ್ನು ನಡೆಸುತ್ತಿದ್ದನು. ಆಗ ದೇವಕಿಯ ಎಂಟನೆಯ ಮಗನಿಂದ ನಿನಗೆ ಮರಣವೆಂದು ಕಂಸನಿಗೆ ಅಶರೀರವಾಣಿ ಹೇಳಿತು. ಇದನ್ನು ಕೇಳಿದ ಕಂಸನು ತಂಗಿಯನ್ನು ಕೊಲ್ಲಲು ಹೊರಟನು. ವಸುದೇವನು ಅನೇಕುಪಾಯಗಳಿಂದ ಕೂಡಿದ ಮಾತುಗಳನ್ನು ಹೇಳಿ, ದೇವಕಿಯಲ್ಲಿ ಹುಟ್ಟುವ ಎಲ್ಲ ಮಕ್ಕಳನ್ನು ನಿನಗೆ ಒಪ್ಪಿಸುವೆನೆಂದು ಹೇಳಿದನು. ಆಗ ಕಂಸನು ವಸುದೇವನ ಮಕ್ಕಳನ್ನು ಕೊಲ್ಲಲು ನಿಶ್ಚಯಿಸಿ ಅವರನ್ನು ಕಾರಾಗೃಹದಲ್ಲಿ ಇಟ್ಟನು.

ಶ್ರೀಕೃಷ್ಣನು ಸ್ವಲ್ಪೇ ಕಾಲದಲ್ಲಿ ಆ ಕಂಸನನ್ನು ಸಂಹರಿಸಿ ಉಗ್ರಸೇನನನ್ನು ಕರೆಸಿ ಅವನನ್ನು ಯಾದವರ ರಾಜ್ಯದಲ್ಲಿ ಪಟ್ಟಾಭಿಷಿಕ್ತನನ್ನಾಗಿ ಮಾಡಿದನು. ಹಾಗೂ ವಸುದೇವ ದೇವಕಿಯರನ್ನು ಕಾರಾಗೃಹದಿಂದ ಬಿಡಿಸಿ ಸಂತೋಷಪಡಿಸಿದನು.

ಇಬ್ಬರುಪ್ಪು ಬೇಡಲಿ ಸದೆದ

ಅರ್ಜುನ ಮತ್ತು ದುರ್ಯೋಧನ ಇಬ್ಬರೂ ಸಹಾಯ ಬೇಡಲು ಶ್ರೀಕೃಷ್ಣನ ಹತ್ತಿರ ಬಂದರು. ಶ್ರೀಕೃಷ್ಣ ಅರ್ಜುನನ ಸಾರಥ್ಯವನ್ನು ಮಾಡಿ ದುರ್ಯೋಧನನನ್ನು ನಾಶಮಾಡಿಸಿದ.

ಹಿಂದೆ ಶ್ರೀಕೃಷ್ಣನ ಹತ್ತಿರ ಸಹಾಯವನ್ನು ಬಯಸಿ ಅರ್ಜುನ, ದರ್ಯೋಧನರು ಏಕ ಕಾಲದಲ್ಲಿ ನಡೆದರು. ದರ್ಯೋಧನ ವೇಗದಲ್ಲಿ ಅರ್ಜುನನನ್ನು ಮೀರಿಸಿದ. ಹಾಗೆ ಮೊದಲು ಬಂದ ದುರ್ಯೋಧನ "ರಾಜರಾಜನಾದ ನಾನು ಪಾದಗಳ ಬಳಿ ಕುಳ್ಳಿರಲಾರೆ" ಎಂದು ಸೊಕ್ಕಿನಿಂದ ಶ್ರೀಕೃಷ್ಣನ ತಲೆಯ ಹತ್ತಿರ ಕುಳಿತ. ಅವರಿಬ್ಬರ ಆಗಮನವನ್ನು ಸರ್ವಜ್ಞ, ಸರ್ವ ಸಮರ್ಥನಾದ ಶ್ರೀಕೃಷ್ಣನು ಮೊದಲೇ ತಿಳಿದಿದ್ದ. ಅವನು ನಿದ್ರೆ ಇಲ್ಲದವನಾದರೂ ನಿದ್ರಿಸಿದವನಂತೆ ನಟಿಸುತ್ತ ಮಲಗಿದ್ದ. ಅರ್ಜುನ ಶ್ರೀಕೃಷ್ಣನಿಗೆ ವಂದಿಸಿ ಭಕ್ತ್ಯುದ್ರೇಕದಿಂದ ಬಾಗಿ ಕೈಜೋಡಿಸಿಕೊಂಡು ನಿಂತುಬಿಟ್ಟ. ದೇವನಾದ ಶ್ರೀಕೃಷ್ಣ ಮೊದಲು ಬಂದವನು

ದುರ್ಯೋಧನ ಎಂದು ತಿಳಿದಿದ್ದರೂ ಅರ್ಜುನನನ್ನು ಮೊದಲಿಗೆ ಕಂಡು ಅರ್ಜುನ! ಸ್ವಾಗತ ಎಂದು ನುಡಿದ. ಅವನು ಹಾಗೆ ಹೇಳಲು ದುರ್ಯೋಧನ ಹೇಳಿಕೊಂಡ "ಮೊದಲು ಬಂದವನು ನಾನೇ" ಈ ಕೃಷ್ಣ ಅವನನ್ನು ಸ್ವಾಗತಿಸಿದ. ಅವರಿಬ್ಬರ ಆಗಮನದ ಕಾರಣವನ್ನು ಕೇಳಿ ಶ್ರೀಕೃಷ್ಣ ನುಡಿದ

"ಒಬ್ಬನು ಮೊದಲು ಬಂದವನು, ಮತ್ತೊಬ್ಬನು ಮೊದಲು ಕಂಡವನು. ಆದ್ದರಿಂದ ನಿಮ್ಮಿಬ್ಬರಿಗೂ ನಾನು ಸಮವಾಗಿ ಸಹಾಯ ನೀಡುವೆ. ಒಂದೆಡೆ ನಿರಾಯುಧನಾದ ನಾನು. ಮತ್ತೊಂದೆಡೆ ಶೂರರೂ ಪದಾತಿಗಳೂ ಆದ ನನ್ನ ಹತ್ತು ಲಕ್ಷ ಪುತ್ರರು. ಶ್ರೀಕೃಷ್ಣ ಹೀಗೆ ಹೇಳಿದಾಗ ಅರ್ಜುನ ಶ್ರೀಕೃಷ್ಣನನ್ನೇ ಅರಿಸಿಕೊಂಡ. ಅವನು ಅವನಲ್ಲಿ ಭಕ್ತಿಯುಳ್ಳವನಾಗಿದ್ದೇ ಅದಕ್ಕೆ ಕಾರಣ. ದುರ್ಯೋಧನನು ಭಕ್ತಿಹೀನನಾದ್ದರಿಂದ ಯುದ್ಧಮಾಡುವ ಅವನ ಪುತ್ರರನ್ನೇ ಆರಿಸಿಕೊಂಡ. ಮುಂದೆ ಕುರುಕ್ಷೇತ್ರ ಯುದ್ಧದಲ್ಲಿ ಶ್ರೀಕೃಷ್ಣ ದುರ್ಯೋಧನನನ್ನು ಭೀಮಸೇನನಿಂದ ಸಂಹಾರ ಮಾಡಿಸಿದ.

ಇಬ್ಬರಿಂದೈದಿ ಹೋಳಮಯ್ಯನ ನಿಬ್ಬರಿಸಿದನ.

ಶ್ರೀಕೃಷ್ಣರೂಪೀ ಭಗವಂತ ಅರ್ಜುನ ಮತ್ತು ಭೀಮಸೇನರ ಜೊತೆಯಲ್ಲಿ ಬಂದು ಆ ಜರಾಸಂದನನ್ನು ಭೀಮಸೇನನಿಂದ ಸಂಹಾರ ಮಾಡಿಸಿದ.

ಹಿಂದೆ ಧರ್ಮರಾಜ ರಾಜಸೂಯ ಯಾಗವನ್ನು ಕೈಕೊಂಡ ಪ್ರಸಂಗದಲ್ಲಿ ಶ್ರೀಕೃಷ್ಣ ಹೇಳಿದ: "ಜರಾಸಂಧ ಜೀವಿಸಿ ಇರುವವರೆಗೆ ರಾಜಸೂಯಯಾಗ ನಡೆಯದು, ಬಲರಾಮನಿಂದಲೂ ಹತನಾಗದ ಅವನನ್ನು ಯಾರು ತಾನೇ ಜಯಿಸಲು ಸಾಧ್ಯ?" ಆಗ ದರ್ಮರಾಜ ಹೇಳಿದ "ಪ್ರಭು! ಶ್ರೀಕೃಷ್ಣ ಈ ಜರಾಸಂಧನ ಕಾರಣದಿಂದಾಗಿ ನಾನು ನನ್ನ ಮನಸ್ಸನ್ನು ರಾಜಸೂಯಯಾಗದಿಂದ ಹಿಂತೆಗೆದಿದ್ದೇನೆ." ಧರ್ಮರಾಜನ ಮಾತನ್ನು ಕೇಳಿ ಭೀಮಸೇನ ಹೇಳಿದ "ಪ್ರಯತ್ನದಿಂದ ಚತುರ್ಮುಖಬ್ರಹ್ಮನ ಪದವಿಯನ್ನಾದರೂ ಸಾಧಿಸಬಹುದು. ಮಹಾಪ್ರಯತ್ನ ಮಾಡದ ಜನರು ಮಾತ್ರ ಎಂದೂ ಅಭ್ಯುದಯ ಹೊಂದಲು ಸಾಧ್ಯವಿಲ್ಲ. ನನ್ನಲ್ಲಿ ಯೋಗ್ಯತೆ ಇದೆ. ಶ್ರೀಹರಿಯ ಮಹತ್ತರವಾದ ಅನುಗ್ರಹವಿದೆ. ಪ್ರಯತ್ನ ಮಾಡಿ ಇದನ್ನು ಸಾಧಿಸೋಣ." ಆಗ ಶ್ರೀಕೃಷ್ಣ ಹೇಳಿದ "ಕಲಿಯ ನಂತರ ಸಮಸ್ತ ಸಜ್ಜನರ ವಿರೋಧಿಗಳಿಗೆ ಬಲವಾಗಿ ಇರುವ ಪ್ರಧಾನ ವ್ಯಕ್ತಿ ಆ ಜರಸಂಧನೊಬ್ಬನೇ. ಅವನನ್ನು ಕೊಲ್ಲಲು ಯೋಗ್ಯ ವ್ಯಕ್ತಿಯನ್ನು ಕಳುಹಿಸಿಕೊಡು." ಆಗ ಧರ್ಮರಾಜ "ನನಗೆ ಆ ಯಜ್ಞವೇ ಬೇಡ" ಎಂದ. ಶ್ರೀಕೃಷ್ಣ ಅರ್ಜುನ ಮತ್ತು ಭೀಮಸೇನ ಇಬ್ಬರನ್ನೂ ಕರೆದುಕೊಂಡು ಹೋಗಿ ಭೀಮಸೇನನಿಂದ ಜರಾಸಂಧನ ಸಂಹಾರ ಮಾಡಿಸಿದನು.

**ಮೂರು ಮನೆಯೊಳಗಿಹನ**
**ಮೂರು ಮಾತಿಗೆ ಹೊಂದದವನ**
**ಮೂರು ಮೈಯನ ಕೃತ ಸೇವೆಗೆ ಮೂರು ರೂಪಾದನ**
**ಮೂರು ಪೊಳಲ ಹಗೆಕಾರನ**
**ಮೂರುವೆಂಬನರುಹಿದನ**
**ಮೂರಾಂತಕ–ಪ್ರಸನ್ವೆಂಕಟ ಮೂರು ಲೋಕೇಶನ ॥ 3 ॥**

ಆ ಭಗವಂತ ಶ್ವೇತದ್ವೀಪ, ಅನಂತಾಸನ, ವೈಕುಂಠಗಳಲ್ಲಿ ಇರುವವನಾಗಿದ್ದಾನೆ. ಅವನು ಸತ್ವ, ರಜ, ತಮೋ ಗುಣಗಳಿಗೆ ಹೊಂದದವನು ಅಂದರೆ ಅಪ್ರಾಕೃತನು. ಶ್ರೀಹನುಮ, ಭೀಮ, ಮಧ್ವರ ಸೇವೆ ಸ್ವೀಕರಿಸಲು ಶ್ರೀರಾಮ, ಶ್ರೀಕೃಷ್ಣ, ಶ್ರೀವೇದವ್ಯಾಸ ರೂಪಗಳನ್ನು ದರಿಸಿದ್ದಾನೆ. ಶಿವನಲ್ಲಿ ನಿಂತು ತ್ರಿಪುರನನ್ನು ನಾಶಮಾಡಿದವನಾಗಿದ್ದಾನೆ. ಆ ಭಗವಂತನೇ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವವನು, ತ್ರಿವಿಧ ಪಾಪಗಳನ್ನು ಪರಿಹರಿಸುವವನು, ಮೂರು ಲೋಕಗಳನ್ನು (ಉಪಲಕ್ಷಣತಯಾ) ಹದಿನಾಲ್ಕು ಲೋಕಗಳನ್ನು ರಕ್ಷಣೆ ಮಾಡುವವನು, ಸ್ವಾಮಿಯು ಆಗಿದ್ದಾನೆ.

ಮೂರು ಮನೆಯೊಳಗಿಹನ.

ಆ ಭಗವಂತನು ಶ್ವೇತದ್ವೀಪ, ಅನಂತಾಸನ, ವೈಕುಂಠಗಳಲ್ಲಿ ಇರುವವನಾಗಿದ್ದಾನೆ.

**ಲಕ್ಷಯೋಜನ ಮೇಲಿಕ್ಕನಂತಾಸನ**
**ಲಕ್ಷ್ಮೀಶನಿಹ ಶ್ವೇತದ್ವೀಪ**
**ಲಕ್ಷವೈವತ್ತು ವೈಕುಂಠ ಇಪ್ಪತ್ತೈದು**
**ಲಕ್ಷಷೋಡಶ ಕೋಟಿಯಲ್ಲಿಹುದು** ॥[17]

ಭೂಮಿಯಿಂದ ಅನಂತಾಸನವು ಒಂದು ಲಕ್ಷಯೋಜನ, ಶ್ವೇತದ್ವೀಪವು ಐವತ್ತು ಲಕ್ಷಯೋಜನ, ವೈಕುಂಠವು 16 ಕೋಟಿ 25ಲಕ್ಷಯೋಜನ ಎತ್ತರದಲ್ಲಿದೆ. ಈ ಮೂರು ಲೋಕಗಳಲ್ಲಿ ಭಗವಂತ ಇರುತ್ತಾನೆ. ಆದ್ದರಿಂದ ಅವನಿಗೆ "ತ್ರಿಧಾಮಾ" ಎಂಬ ಹೆಸರಿದೆ.

ಮೂರು ಮತಿಗೆ ಹೊಂದದವನ.

ಆ ಭಗವಂತನು ಸತ್ವ, ರಜ, ತಮೋಗುಣಗಳಿಗೆ ಹೊಂದದವನು ಅಂದರೆ ಅಪ್ರಾಕೃತನು.

**ನಾರಾಯಣಂ ಸುರಗುರುಂ ಜಗದೇಕನಾಥಂ**
**ಭಕ್ತಪ್ರಿಯಂ ಸಕಲಲೋಕ ನಮಸ್ಕೃತಂ ಚ।**
**ತ್ರೈಗುಣ್ಯವರ್ಜಿತ ಮಜಂ ವಿಭುಮಾದ್ಯಮೀಶಂ**
**ವಂದೇ ಭವಘ್ನಮಮರಾಸುರಸಿದ್ಧವಂದ್ಯಂ॥**[18]

ಇಲ್ಲಿ "ತ್ರೈಗುಣ್ಯವರ್ಜಿತಂ" ಇದು ಭಗವಂತ ಸತ್ವ, ರಜ, ತಮೋಗುಣಗಳಿಂದ ದೂರನೆಂದು ತಿಳಿಸುತ್ತದೆ.

ಮೂರು ಮೈಯನ ಕೃತ ಸೇವೆಗೆ ಮೂರುರೂಪಾದನ.

ಶ್ರೀ ಹನುಮ, ಭೀಮ, ಮಧ್ವರ ಸೇವೆ ಸ್ವೀಕರಿಸಲು ಭಗವಂತ ಶ್ರೀರಾಮ, ಶ್ರೀಕೃಷ್ಣ, ವೇದವ್ಯಾಸ ರೂಪಗಳನ್ನು ದರಿಸಿದ್ದಾನೆ.

**ಶ್ರೀರಾಮಂ ಹನುಮತ್ಸೇವ್ಯಂ**
**ಶ್ರೀಕೃಷ್ಣಂ ಭೀಮಸೇವಿತಂ**
**ಶ್ರೀವ್ಯಾಸಂ ಮಧ್ವ ಸಂಸೇವ್ಯಂ**
**ಸಮಸ್ತಾಭೀಷ್ಟಂ ಬಜೇ॥**[19]

ಮೂರು ಪೊಳಲ ಹಗೆಕಾರನ.

ಆ ಭಗವಂತನು ಶಿವನಲ್ಲಿ ನಿಂತು ತ್ರಿಪುರನನ್ನು ನಾಶಮಾಡಿದವನಾಗಿದ್ದಾನೆ.

ಹಿಂದೆ ಸುರರಿಂದ ಪರಾಜಿತರಾದ ಅಸುರರು ಮಯನನ್ನು ಮೊರೆಹೊಕ್ಕರು. ಅವನು ಬಂಗಾರ, ಬೆಳ್ಳಿ, ಕಬ್ಬಿಣದಿಂದ ಮೂರು ಪಟ್ಟಣಗಳನ್ನು ನಿರ್ಮಿಸಿಕೊಟ್ಟನು. ಅಸುರರು ಅವುಗಳಲ್ಲಿ ಅಡಗಿ ಇಂದ್ರಾದಿ ದೇವತೆಗಳನ್ನು ಪೀಡಿಸಹತ್ತಿದರು. ದೇವತೆಗಳು ರುದ್ರದೇವರನ್ನು ಮೊರೆಹೊಕ್ಕರು. ಶಿವನು ಅವರಿಗೆ ಅಭಯನೀಡಿ ಪಾಶುಪತಾಸ್ತ್ರವನ್ನು ತ್ರಿಪುರಗಳ ಮೇಲೆ ಬಿಟ್ಟನು. ತ್ರಿಪುರವಾಸಿಗಳು ಸತ್ತುಬಿದ್ದರು. ಮಯನು ಸಿದ್ಧಾಮೃತಕೂಪದಲ್ಲಿ ಸತ್ತವರನ್ನು ಅದ್ದಿ ಬದುಕಿಸಿದನು. ಆಗ ಅವರು ದ್ವಿಗುಣ ಬಲವುಳ್ಳವರಾಗಿ ಬೆಳೆದು

ನಿಂತರು. ಇದನ್ನು ನೋಡಿ ರುದ್ರದೇವರು ಭಗ್ನಸಂಕಲ್ಪರಾದರು. ಶ್ರೀಹರಿಯನ್ನು ಮೊರೆಹೊಕ್ಕರು. ಶ್ರೀಹರಿಯು ರುದ್ರದೇವರಿಗೆ ಕೀರ್ತಿಯನ್ನು ಕೊಡುವುದಕ್ಕಾಗಿ ತಾನು ಆಕಳರೂಪ ತೆಗೆದುಕೊಂಡು, ಬ್ರಹ್ಮದೇವರನ್ನು ಕರುವನ್ನಾಗಿ ಮಾಡಿಕೊಂಡು ಬಂದು ಆ ಸಿದ್ಧಾಮೃತಕೂಪದಲ್ಲಿದ್ದ ರಸವನ್ನು ಕುಡಿದುಬಿಟ್ಟನು. ಮೋಹಿತರಾದ ಅಸುರರು ಇದನ್ನು ನೋಡಿದರೂ ಸುಮ್ಮನೆ ಇದ್ದರು. ಮಯನು ಭಗವಂತನ ಮಹಿಮೆ ಇದೆಂದು ತಿಳಿದು ಚಿಂತಿಸುತ್ತಿದ್ದ ದೈತ್ಯರನ್ನು ಕುರಿತು "ಭಗವಂತನೇ ಸ್ವತಂತ್ರ, ಅವನು ಕೊಟ್ಟ ಸುಖದುಃಖಗಳನ್ನು ಅನುಭವಿಸಲೇ ಬೇಕು" ಎಂದು ಹೇಳಿದನು. ಭಗವಂತನು ರುದ್ರದೇವರಿಂದ ಅಭಿಜಿತ್ ಮುಹೂರ್ತದಲ್ಲಿ ತ್ರಿಪುರಗಳನ್ನು ನಾಶ ಮಾಡಿಸಿದನು.

ಮೂರುವೆಂಬ ನರುಹಿದನ

ಆ ಭಗವಂತನೇ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವವನು ಆಗಿದ್ದಾನೆ.

**ಉತ್ಪತ್ತಿ ಸ್ಥಿತಿ ಸಂಹಾರಾ ನಿಯತಿರ್ಜ್ಞಾನ ಮಾವೃತಿಃ।**
**ಬಂಧ ಮೋಕ್ಷೌ ಚ ಪುರುಷಾದ್ಯದ್ಮಾತ್ಸ ಹರಿರೇಕರಾಟ್॥**[20]

ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಾದಿಗಳೆಲ್ಲವನ್ನೂ ಶ್ರೀಹರಿಯೇ ಮಾಡುತ್ತಾನೆ ಸಂದೇಹವಿಲ್ಲ.

**ಮೂರಾಂತಕ ಪ್ರಸನ್ವೆಂಕಟ ಮೂರು ಲೋಕೇಶನ।**

ಆ ಭಗವಂತನು ತ್ರಿವಿಧ ತಾಪಗಳನ್ನು ಪರಿಹರಿಸುವವನಾಗಿದ್ದಾನೆ. ಅವನೇ ಪ್ರಸನ್ವೆಂಕಟನು.

ಆದಿಭೌತಿಕ, ಆಧ್ಯಾತ್ಮಿಕ ಮತ್ತು ಆದಿದೈವಿಕಗಳೇ ತಾಪತ್ರಯಗಳು.

ಪರಿಸರದಿಂದ ತಾಪ ಆದಿಭೌತಿಕ, ದೈಹಿಕವಾಗಿ ಆಗುವ ತಾಪ ಅಧ್ಯಾತ್ಮಿಕ, ದೈವಿಕವಾದದ್ದು ಆದಿದೈವಿಕ ತಾಪವೆಂದು ತಿಳಿಯಬೇಕು.

ಈ ಎಲ್ಲ ತಾಪಗಳನ್ನು ಪರಿಹರಿಸುವವನು, ನಾಶಮಾಡುವವನು ಆ ಭಗವಂತ. ಆದ್ದರಿಂದ ಅವನು ಮೂರಾಂತಕನೆನಿಸಿದ್ದಾನೆ.

ಆ ಭಗವಂತನು ಮೂರು ಲೋಕಗಳಿಗೆ ಉಪಲಕ್ಷಣತಯಾ ಹದಿನಾಲ್ಕು ಲೋಕಗಳಿಗೆ ಈಶ ಅಂದರೆ ಸ್ವಾಮಿಯಾಗಿದ್ದಾನೆ.

ಶ್ರೀವಿಷ್ಣುಸಹಸ್ರನಾಮಸ್ತೋತ್ರದಲ್ಲಿ ಆ ಭಗವಂತನನ್ನು "ತ್ರಿಲೋಕೇಶ" [21] ಎಂಬುದಾಗಿ ಕರೆದಿರುವುದು ಗಮನಾರ್ಹವಾಗಿದೆ.

**ತ್ರಿಲೋಕಾಃ**

**1) ತ್ರಯಶ್ಚತೇ ಲೋಕಾಶ್ಚ ತ್ರಿಲೋಕಾಃ ಭೂಭುವಃ ಸ್ವರಾಖ್ಯಾಃ। ತೇಷಾಮೀಶಃ ತ್ರಿಲೋಕೇಶಃ**
**ಭೂಃ, ಭುವಃ, ಸ್ವಃ ಎಂಬ ಮೂರು ಲೋಕಗಳಿಗೆ ಸ್ವಾಮಿಯು.**

**2) ತ್ರಯಃ ಲೋಕಾಃ ಅಸ್ಯ ಸೃಜ್ಯತ್ವೇನ ಸಂತೀತಿ ತ್ರಿಲೋಕಃ।**
**ಸರ್ವೇಶತ್ವಾತ್ ಈಶಃ। ತ್ರಿಲೋಕಶ್ಚಾಸೌ ಈಶಶ್ಚ ತ್ರಿಲೋಕೇಶಃ।**

ಮೂರು ಲೋಕಗಳನ್ನೂ ಸೃಷ್ಟಿಸುವವನು ಮತ್ತು ಸ್ವಾಮಿಯು

ಹೀಗೆ ಆ ಭಗವಂತನ ವಿಶೇಷ ಮಹಿಮೆಗಳನ್ನು ಪ್ರಸ್ತುತ ಮುಂಡಿಗೆಯಲ್ಲಿ ಶ್ರೀ ಪ್ರಸನ್ನವೆಂಕಟದಾಸರು ತಿಳಿಸಿಕೊಟ್ಟಿದ್ದಾರೆ. ಅವರ ಈ ಉಪಕಾರಕ್ಕೆ ನಾವು "ಭೂಯಿಷ್ಠಾಂ ತೇ ನಮಉಕ್ತಿಂ ವಿಧೇಮ" ಹೇಳಬೇಕಷ್ಟೇ!


1) ಕಂದರ್ಪೋ ದರ್ಪಕೋ ನಂಗಃ ಕಾಮಃ ಪಂಚಶರಸ್ಸ್ಮರೇಃ ॥ ಅಮರಕೋಶ
2) ಶ್ರೀಮದ್ ಭಾಗವತ (8–10–55)
3) ಶ್ರೀಮದ್ ಭಗವದ್ಗೀತಾ
4) ಮೈತ್ರಾಯಿಣೀ ಉಪನಿಷತ್
5) ಶ್ರೀಕೃಷ್ಣಾಮೃತಮಹಾರ್ಣವ – 36ನೇ ಶ್ಲೋಕ
6) ಶ್ರೀಕೃಷ್ಣಾಮೃತಮಹಾರ್ಣವ – 37ನೇ ಶ್ಲೋಕ
7) ಶ್ರೀಕೃಷ್ಣಾಮೃತಮಹಾರ್ಣವ – 39ನೇ ಶ್ಲೋಕ
8) ಶ್ರೀವಿಷ್ಣುಸಹಸ್ರನಾಮಸ್ತೋತ್ರ
9) ಶ್ರೀ ದ್ವಾದಶ ಸ್ತೋತ್ರ
10) ಶ್ರೀಮದ್ ಭಾಗವತ – (4–9–6)
11) ಶ್ರೀಮತ್ ಸುಮಧ್ವ ವಿಜಯ – (9–54)
12) ಶ್ರೀ ಮ. ಭಾ. ತಾ. ನಿರ್ಣಯ – (8–8)
13) ಶ್ರೀಮದ್ ಭಾಗವತ – (5–17–1)
14) ಶ್ರೀ ಮ. ಭಾ. ತಾ. ನಿರ್ಣಯ
15) ಶ್ರೀ ಮ. ಭಾ. ತಾ. ನಿರ್ಣಯ – (21–355)
16) ಅನುಸ್ಮೃತಿ –(ಶ್ರೀಮನ್ ಮಹಾಭಾರತ) 24ನೇ ಶ್ಲೋಕ
17) ಶ್ರೀ ವಾದಿರಾಜರ ವೈಕುಂಠ ವರ್ಣನೆ – (1–57)
18) ಶ್ರೀಮನ್ ಮಹಾಭಾರತ
19) ಶ್ರೀ ಶ್ರೀನಿವಾಸತೀರ್ಥ ವಿರಚಿತ ಮಂಗಲಾಚರಣ ಶ್ಲೋಕ
20) ಶ್ರೀ ಬ್ರಹ್ಮಸೂತ್ರ ಭಾಷ್ಯದಲ್ಲಿ ಸ್ಕಂದ ವಚನ–(1–1–2)
21) ಶ್ರೀಮನ್ ಮಹಾಭಾರತ


❖ ❖ ❖